ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-2 Issue 3, Nov-Dec 2020, 100-106**
**©*IIMRD*, Mysuru**
IIMRD JOURNALS

**www.iimrd.com**

# ಮಾಸ್ತಿಯವರ ಸಾಹಿತ್ಯದಲ್ಲಿ ವಸ್ತು ವೈವಿಧ್ಯತೆ

**ಡಾ. ಸಿದ್ಧಲಿಂಗಪ್ಪ ಎಸ್. ದೇಶಮುಖ್[1]**

**ಪೀಠಿಕೆ**

ಕನ್ನಡದ ಸಣ್ಣ ಕತೆಗಳ ಸಾಹಿತ್ಯ ಲೋಕದಲ್ಲಿ ಮಾಸ್ತಿಯವರ ಹೆಸರು ಎಂದೂ ಮಾಸದ್ದು, ಅದರಲ್ಲೂ ಐತಿಹಾಸಿಕ ಮಹತ್ವದ ದೃಷ್ಟಿಯಿಂದ ಮಾಸ್ತಿಯವರದು ಗಟ್ಟಿ ಹೆಸರು. ಹೊಸಗನ್ನಡ ಸಾಹಿತ್ಯದ ಸಣ್ಣ ಕಥಾ ಪ್ರಕಾರದ ಆರಂಭದ ಬರಹಗಾರರಲ್ಲಿ ಮಾಸ್ತಿಯವರು ಪ್ರಮುಖವಾಗಿದ್ದಾರೆ. ನನ್ನ ಕಥೆಗಳನ್ನು ಬರೆಯುವುದರಲ್ಲಿ ನನ್ನ ಉದ್ದೇಶ ಒಂದೇ ಒಂದು ಎಂದು ನಾನು ಹಲವು ಸಂದರ್ಭದಲ್ಲಿ ಸೂಚಿಸಿದ್ದೇನೆ. ಆ ಉದ್ದೇಶ ಜೀವನ ನನಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದು. ಇವು ಸತ್ಯವನ್ನು ಬಿಂಬಿಸಿವೆ ಸ್ಫುಟವಾಗಿ ಇಷ್ಟೋ ಅಷ್ಟೋ ರಸಾನುಭವವನ್ನು ನೀಡುತ್ತವೆ ಎಂದು ಓದುಗರಿಗೆ ಕಂಡರೆ ನನ್ನ ಕೆಲಸ ಸಾರ್ಥಕ ಆಯಿತು. (ಸಣ್ಣ ಕಥೆಗಳ ಮಾಸ್ತಿ ಮುನ್ನುಡಿ) ಎಂದು ತಮ್ಮ ಬರವಣಿಗೆಯ ಉದ್ದೇಶವನ್ನು ಘೋಷಿಸಿ ಸಾಹಿತ್ಯ ರಚನೆಯನ್ನು ಮಾಡುತ್ತ ಮುಂದೆ ಸಾಗಿದವರು ಮಾಸ್ತಿ.

ಮಾಸ್ತಿಯವರ ಕಥೆಗಳಲ್ಲಿ ಸಾಮಾನ್ಯವಾಗಿ ಈ ಕೆಳಕಂಡ ವಸ್ತುಗಳನ್ನು ಕಾಣುತ್ತೇವೆ.

- ●ಪೂರ್ವ ಪಶ್ಚಿಮಗಳ ಬೇಟಿ (East-west encourter)
- ●ಸಾಮಾಜಿಕ ಅನ್ಯಾಯಗಳು ಮತ್ತು ಅವುಗಳಿಂದುಂಟಾದ ನೋವು.
- ●ಸಾಮಾಜಿಕ ಮತ್ತು ವೈಯಕ್ತಿಕ ಜೀವನದಲ್ಲಿ ಸಂಬದ್ಧತೆ (Order) ಸಾಮಾನ್ಯ.

ವಸ್ತು ಬಹುತೇಕ ಒಂದೇ ತೆರನಾಗಿ ಕಂಡರೂ ಅದನ್ನು ಅನುಭವಿಸುವ ಪರಿಭಾವಿಸುವ ಅಭಿವ್ಯಕ್ತಿಸುವ ದೃಷ್ಟಿಕೋನ ಬೇರೆ ಬೇರೆಯಾಗಿದೆ. ಬರಹಗಾರರನ್ನು ಗುರುತಿಸಬಹುದಾಗಿದ್ದು ಒಂದು ವರ್ಗದವರು ಆ ಬೇಟಿಯ ರಾಜಕೀಯ ಕೋನ ತಮ್ಮ ಬರಹದಲ್ಲಿ ತಂದರೆ ಮತ್ತೊಂದು ವರ್ಗದವರು ಇಂಗ್ಲೀಷ್ ಕಲಿತ ಭಾರತೀಯರು ಎದುರಿಸುವ ಸಮಸ್ಯೆಗಳನ್ನು ಒತ್ತಿ ಹೇಳುತ್ತಾರೆ. 1920ರಲ್ಲಿ ಪ್ರಕಟವಾದ ಕೆಲವು ಸಣ್ಣಕತೆಗಳ ಸಂಕಲನದ ರಂಗನ ಮದುವೆ, ರಂಗಪ್ಪನ ದೀಪಾವಳಿ, ರಂಗಪ್ಪನ ಕೋರ್ಟ್‌ಶಿಪ್ ಮತ್ತು ರಂಗಸ್ವಾಮಿಯ ಅವಿವೇಕ ಈ ಎಲ್ಲಾ ಕತೆಗಳು ಪ್ರೇಮವನ್ನೇ ಮುಖ್ಯ ವಸ್ತುವಾಗಿ ಒಳಗೊಂಡವು ತಾನೇ ಮೆಚ್ಚಿ ಮದುವೆ ಮಾಡಿಕೊಳ್ಳಬೇಕು ಎಂಬುದನ್ನು ಪ್ರತಿಪಾದಿಸುವಂಥವು. ಮೇಲೆ ಪ್ರಸ್ತಾಪಿಸಿದ ಮೊದಲ ಮೂರು ಕಥೆಗಳ ವಸ್ತು ಒಂದು ದೃಷ್ಟಿಯಲ್ಲಿ ರಂಗ ತನ್ನ ಸಮಾಜಕ್ಕೆ ಹೊಂದದ ಅಭಿಪ್ರಾಯಗಳ ನಿರರ್ಥಕತೆಯನ್ನು ಮತ್ತು ಸಮಾಜದಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವ ರೀತಿಯನ್ನು

---
*[1] ಕನ್ನಡ ಸಹಾಯಕ ಪ್ರಾಧ್ಯಾಪಕರು, ಸೈಂಟ್ ಕ್ಲಾರೆಟ್ ಕಾಲೇಜು, ಬೆಂಗಳೂರು.*

ಅರಿತುಕೊಳ್ಳುವುದಾಗಿದೆ. ಇವುಗಳಲ್ಲಿನ ಕತೆಗಾರ ತಾನು ಮತ್ತು ರಂಗನಿರುವ ಸಮಾಜ ವ್ಯವಸ್ಥೆ ಸರಿಯಾದುದು ಎಂದು ನಂಬಿದವನು. ಆದ್ದರಿಂದಲೇ ರಂಗನ ಅಭಿಪ್ರಾಯಗಳು ಸಮಾಜದ ಸರಿ ಒಪ್ಪುಗಳ ಕಲ್ಪನೆಯನ್ನು ಬಿಟ್ಟು ಅಡ್ಡಹರಿದಂಥವು (Deviation) ಈ ನಂಬಿಕೆ ಕತೆಗಳ ಬೆನ್ನು ಮೂಳೆಯಾಗಿರುವುದನ್ನು ವಿಶೇಷವಾಗಿ ಲೇಖಕರು ಓದುಗರ ಗಮನಕ್ಕೆ ತರುತ್ತಾರೆ.

ಮಾಸ್ತಿಯವರ ಕಥೆಗಳಲ್ಲಿ ಭಾರತೇತರ ದೇಶಗಳ ಪಾತ್ರಗಳಿಗೆ ಪ್ರಾಮುಖ್ಯ ನೀಡಿದ ಕೆಲವು ಕಥೆಗಳಿವೆ. 'ಸೋರಲಿ ಪ್ರಸಂಗ' ಇದಕ್ಕೊಂದು ಉದಾಹರಣೆ. ಬೇರೆ ದೇಶದಿಂದ ಬಂದು ಭಾರತದಲ್ಲಿ ನೆಲಸಿ ತಮ್ಮದಲ್ಲದ ಇಲ್ಲಿನ ಸಂಸ್ಕೃತಿಯಲ್ಲಿ ತಮ್ಮತನ ಉಳಿಸಿಕೊಳ್ಳಲು ಪ್ಲಾಂಟರುಗಳು ಮಾಡುವ ಪ್ರಯತ್ನ ಸೋರಲಿ ಪ್ರಸಂಗ ಕಥೆಯಲ್ಲಿದೆ. ಸಂಸ್ಕೃತಿಗೆ ಸಾವು ನೋವನ್ನು ಎದುರಿಸುವ ಮತ್ತು ಒಪ್ಪಿಕೊಳ್ಳುವ ಶಕ್ತಿಯಿದೆ ಎಂಬುದನ್ನು ಮಾಸ್ತಿಯವರ ಅನೇಕ ಕತೆಗಳು ತಿಳಿಸುತ್ತವೆ. ತಮ್ಮ ಅನುಭವದ ಅಂಗವಾದ ಸ್ವಯಂಪೂರ್ಣ ಸಂಸ್ಕೃತಿಯ ಚೌಕಟ್ಟಿನಲ್ಲಿ ಏಳುವ ಸಮಸ್ಯೆಗಳನ್ನು ಅರಿತುಕೊಳ್ಳುವುದು ಸಾಧ್ಯವಾದಾಗ ಮಾತ್ರ ಕತೆಗಳು ಪೂರ್ಣವಾಗಿ ಸಫಲತೆ ಕಾಣುತ್ತವೆ. ಉದಾಹರಣೆಗೆ ಮಾಸ್ತಿಯವರ 'ಕೃಷ್ಣಮೂರ್ತಿಯ ಹೆಂಡತಿ' ಮತ್ತು 'ಮೇಲೂರಿನ ಲಕ್ಷ್ಮಮ್ಮ' ಕಥೆಗಳಲ್ಲಿ ಮೊದಲ ಕತೆಯ ವಸ್ತು ಮತ್ತು 'ಬಾಲವಿಧವಾ ಸಮಸ್ಯೆ' ಕುರಿತದ್ದು, ಎರಡನೆಯ ಕಥೆ ಹೊಣೆಗಾರಿಕೆಯ ವಿಚಾರವನ್ನುಳ್ಳದ್ದು. ಸಮಾಜದ ಸರಿ ಒಪ್ಪುಗಳ ಕಲ್ಪನೆಯನ್ನು ಮೀರಿ ಹೋಗುವ ವಸ್ತುವನ್ನುಳ್ಳ ಕತೆಗಳ ಮೇಲೂ ನೋವಿನ ಗೂಢತೆಯನ್ನು ಒಪ್ಪಿಕೊಳ್ಳುವ ಮನೋಧರ್ಮ ಅವರ 'ವೆಂಕಟಶಾಯಿಯ ಪ್ರಣಯ' ಮತ್ತು ಚಿಕ್ಕವ್ವ ಕತೆಗಳಲ್ಲಿ ಕಾಣಬಹುದು.

ಆಂಗ್ಲ ನೌಕಾ ಕ್ಯಾಪ್ಟನ್ ಮತ್ತು ವೆಂಕಟಿಗನ ಹೆಂಡತಿ ಎಂಬ ಇರಡು ಕತೆಗಳು ಹೋರಾಟ ಕೇವಲ ಹೋರಾಟವಾಗಿ ಉಳಿಯದೆ, ಕಥೆ ದುರಂತವಾಗದೆ ಕೊನೆಯಾಗುವಂತೆ ದೂಡುತ್ತಾರೆ. ಈ ಎರಡೂ ಕತೆಗಳಲ್ಲಿ ಗಂಡನನ್ನು ಬಿಟ್ಟು ನೀತಿ ಕಟ್ಟಲೆಗಳನ್ನು ಮುರಿದ ಹೆಣ್ಣು, ಆಕೆಯನ್ನು ಪುನಃ ಒಪ್ಪಿಕೊಳ್ಳುವ ಗಂಡಿನ ಮನಸ್ಸು ಮತ್ತು ಪ್ರತಿಕ್ರಿಯೆ ಕುರಿತ ವಸ್ತುವಿದೆ. ಎರಡೂ ಕಡೆಯ ಗಂಡಸರು ತಮ್ಮ ತಮ್ಮ ಹೆಂಡತಿಯನ್ನು ಪುನಃ ಸ್ವೀಕರಿಸುತ್ತಾರೆ.

ಸಾಂಪ್ರದಾಯಿಕ ಮೌಲ್ಯಗಳ ಚೌಕಟ್ಟನ್ನು ಬಿಡದೆ ಕತೆಗಾರ ಸಂವೇದನಾಶೀಲತೆ ಇತಿ ಮಿತಿಗಳನ್ನೇ ಕತೆಯ ಕೇಂದ್ರ ವಸ್ತುವಾಗಿಸಿಕೊಂಡು ರಚಿತವಾದ ಕೆಲವು ಕತೆಗಳಿವೆ. ಅವುಗಳಲ್ಲಿ ಒಂದು 'ಬೈಚೇಗೌಡ' ಎಂಬುದು ಶಾನುಭೋಗನೊಬ್ಬ ತನ್ನ ಹಳ್ಳಿಯವರಿಗೆ ದ್ರೋಹ ಬಗೆಯುವುದನ್ನು ಈ ಕತೆ ಚಿತ್ರಿಸುತ್ತದೆ. ಶಾನುಭೋಗನಿಗೆ ಸಹಾಯ ಮಾಡಲು ಹೋಗಿ ಬೈಚೇಗೌಡ ಪೇಚಿಗೆ ಸಿಕ್ಕಿಕೊಳ್ಳುತ್ತಾನೆ ಕತೆ ದುರಂತವಾಗುತ್ತದೆ. ಸಮಾಜದ ಸರಿ ತಪ್ಪುಗಳ ಕಲ್ಪನೆ ಮತ್ತು ಬೈಚೇಗೌಡನ ಅಸಹಾಯಕತೆ ಇಲ್ಲಿ ಗಮನಿಸಬೇಕಾದ ಅಂಶಗಳು 'ಜೋಗೇರ ಅಂಜಪ್ಪನ ಕೋಳಿ ಕತೆ' ಕೂಡ ಅನ್ಯಾಯಕ್ಕಿಂತ ಸನ್ನಿವೇಶದ ಜಟಿಲತೆಯ ಮೇಲೆ ಕೇಂದ್ರೀಕರಿಸಿ ರಚಿತವಾದ ಒಂದು ಸಫಲ ಕತೆಯಾಗಿದೆ.

**ಮಾಸ್ತಿ ಕಾದಂಬರಿಗಳಲ್ಲಿನ ವಸ್ತು ವೈವಿಧ್ಯತೆ**

ಮಾಸ್ತಿಯವರು ನಾಲ್ಕು ಕಾದಂಬರಿಗಳನ್ನು ರಚಿಸಿದ್ದಾರೆ. ಚೆನ್ನಬಸವ, ಚಿಕ್ಕವೀರ ರಾಜೇಂದ್ರ, ಶೇಷಮ್ಮಾ ಮತ್ತು ಸುಬ್ಬಣ್ಣ. ಇಲ್ಲಿ ಚೆನ್ನಬಸವ ಮತ್ತು ಚಿಕ್ಕವೀರ ರಾಜೇಂದ್ರ ಕಾದಂಬರಿಗಳು ಎರಡು

ರಾಜ ಮನೆತನಗಳನ್ನು ವಸ್ತುವನ್ನಾಗಿಟ್ಟುಕೊಂಡು ಮುಂದೆ ಅವು ಹೇಗೆ ಪತನವಾದವು ಎನ್ನುವುದರ ಬಗ್ಗೆ ಚಿತ್ರಣ ನೀಡುತ್ತವೆ. ಸಂಗೀತಗಾರ ಸುಬ್ಬಣ್ಣನ ಜೀವನಾಧಾರಿತ ಕಾದಂಬರಿ ಸುಬ್ಬಣ್ಣ ಇದು ಹದಿನಾರು ಬಾರಿ ಮರು ಮುದ್ರಣವಾಗಿದೆ. ಇನ್ನೂ ಶೇಷಮ್ಮ ಹೆಸರೆ ಸೂಚಿಸುವಂತೆ ಅವಳ ವಿಶಿಷ್ಟ ಬದುಕನ್ನು ಚಿತ್ರಿಸುವ ಕಾದಂಬರಿಯಾಗಿದೆ. ಒಟ್ಟಾರೆ ಮಾಸ್ತಿಯವರು ಎರಡು ಐತಿಹಾಸಿಕ ಮತ್ತು ರಾಜಕೀಯ ಕಾದಂಬರಿಗಳನ್ನು ರಚಿಸಿದರೆ ಎರಡು ಸಾಮಾಜಿಕ ಕಾದಂಬರಿಗಳನ್ನು ರಚಿಸಿದ್ದಾರೆ.

'ಇವರ ಚಿಕ್ಕವೀರ ರಾಜೇಂದ್ರ' ಕೊಡಗಿನ ದೊರೆ ಚಿಕ್ಕವೀರ ರಾಜನನ್ನು ಕುರಿತ ಐತಿಹಾಸಿಕ ಕಾದಂಬರಿಯಾಗಿದ್ದು, ಇದು ಹಿಂದಿ, ತಮಿಳು, ಗುಜರಾತಿ ಮತ್ತು ಅಸ್ಸಾಮಿ ಭಾಷೆಗಳಿಗೂ ಭಾಷಾಂತರಗೊಂಡಿದೆ. ಚನ್ನಬಸವ ನಾಯಕ ಕಾದಂಬರಿಯು ಹದಿನೆಂಟನೆಯ ಶತಮಾನಕ್ಕೆ ಸೇರಿದ್ದ ಕಥೆ, ಮಾಸ್ತಿಯವರು ಚಿಕ್ಕ ಮಗಳೂರಿನಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ಸಮಯದಲ್ಲಿ ತಾವು ಸಂಪರ್ಕಿಸಿದ ಜನರಿಂದ ಹಾಗೂ ತಾವು ಸಂದರ್ಶಿಸಿದ ಸ್ಥಳಗಳ ಐತಿಹ್ಯಗಳಿಂದ ಈ ಕಾದಂಬರಿ ರಚನೆಯಾಗಿರುವುದು, ಇದು ಬಿದನೂರಿನ ಪತನಕ್ಕೆ ಕಾರಣವಾದ ಅಂಶಗಳನ್ನು ವಸ್ತುವಾಗಿಸಿಕೊಂಡಿರುವ ಕಾದಂಬರಿಯಾಗಿದೆ. **'ಶೇಷಮ್ಮ'** ಒಂದು ಸಾಮಾಜಿಕ ಕಾದಂಬರಿಯಾಗಿದ್ದು ಕಷ್ಟಜೀವಿಯಾದ ಒಂದು ಹಳ್ಳಿ ಹೆಣ್ಣು ಮಗಳ ಜೀವನ ವೃತ್ತಾಂತ ಇದರ ಪ್ರಮುಖ ವಸ್ತುವಾಗಿದೆ. ತನ್ನ ಎಲ್ಲಾ ಕಷ್ಟಗಳನ್ನು ಪ್ರೀತಿ ವಿಶ್ವಾಸಗಳಿಂದ ತುಂಬಿಕೊಂಡು ಜೀವನವನ್ನು ಸಾಗಿಸಿದ ಶೇಷಮ್ಮ ತನ್ನ ಮತ್ತು ಮನೆಯ ಮರ್ಯಾದೆಗೆ ಎಂದೂ ಕುಂದು ಬರದ ಹಾಗೆ ಬದುಕನ್ನು ಕಟ್ಟಿಕೊಂಡ ಮಹಾಮಾತೆ.

**ಮಾಸ್ತಿಯವರ ನಾಟಕಗಳ ವಸ್ತು ವೈವಿಧ್ಯತೆ**

ಮಾಸ್ತಿಯವರ ನಾಟಕ ಪ್ರಪಂಚ ತುಂಬ ವಿಶಾಲವಾದುದು. ಕನ್ನಡ ರಂಗಭೂಮಿಯ ಶ್ರೀಮಂತಿಕೆಯನ್ನು ಹೆಚ್ಚಿಸಿದವರು ಮಾಸ್ತಿಯವರು. ಶಾಂತಾ, ಸಾವಿತ್ರಿ, ಉಷಾ, ತಾಳಿಕೋಟೆ, ಮಂಜುಳಾ, ಯಶೋಧರಾ, ಅನಾರ್ಕಲಿ, ತಿರುಪಾಣಿ, ಮಾಸತಿ, ಕಾಳಿದಾಸ, ಪುರಂದರ ದಾಸ, ಕನಕಣ್ಣ, ಅಜ್ಜನದಾರ, ಭಟ್ಟರ ಮಗಳು ಮುಂತಾದ ಹದಿನೆಂಟು ಸಾಮಾಜಿಕ, ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳನ್ನು ಬರೆದಿದ್ದಾರೆ. ಮಾಸ್ತಿಯವರು 1955 ರಲ್ಲಿ ರಚಿಸಿದ 'ಅನಾರ್ಕಲಿ' ನಾಟಕದಿಂದ ಆರಂಭವಾಗಿ 1973ರ ಸಾವಿತ್ರಿ ನಾಟಕದವರೆಗೆ ಅವರ ಹದಿನಾಲ್ಕು ನಾಟಕಗಳ ಕಥಾವಸ್ತುಗಳು ವೈವಿಧ್ಯತೆಯಿಂದ ಕೂಡಿವೆ. ಅವರ ಪೌರಾಣಿಕ ನಾಟಕಗಳೆಂದರೆ, ಶಾಂತ, ಸಾವಿತ್ರಿ, ಉಷಾ ನಾಟಕಗಳಾದರೆ, ಅವರ ಐತಿಹಾಸಿಕ ನಾಟಕಗಳಾಗಿ ತಾಳಿಕೋಟೆ, ಕಾಕನಕೋಟೆ, ಅನಾರ್ಕಲಿ, ಯಶೋಧರಾ, ಮಾಸತಿ, ಭಟ್ಟರ ಮಗಳು, ತಿರುಪಾಣಿ, ಪುರಂದರದಾಸ, ಛತ್ರಪತಿ, ಕನಕಣ್ಣ ಮೊದಲಾದವುಗಳು, ಹಾಗೆಯೇ ಅವರ ಸಾಮಾಜಿಕ ನಾಟಕ ಮಂಜುಳಾ ಆಗಿದೆ. ಪೌರಾಣಿಕ ನಾಟಕವಾದ ಸಾವಿತ್ರಿ ನಾಟಕವು ಯಮನನ್ನು ಸೋಲಿಸಿ ಸತ್ತ ಗಂಡನನ್ನು ಮರಳಿ ಬದುಕಿಸಿದ ಕಥೆ ಸಾವಿತ್ರಿ ನಾಟಕವಾದರೆ, ಉಷಾ ಶ್ರೀಕೃಷ್ಣನ ಮೊಮ್ಮಗ ಅನಿರುದ್ಧ ಬಾಣನ ಮಗಳು ಉಷೆಯನ್ನು ಮದುವೆಯಾದ ಪ್ರಸಂಗ ಇಲ್ಲಿನ ನಾಟಕದ ವಸ್ತುವಾಗಿದೆ. ಐತಿಹಾಸಿಕ ನಾಟಕಗಳು ತಾಳಿಕೋಟೆಯಲ್ಲಿ ವಿಜಯನಗರದ ರಾಮರಾಯರಿಗೂ ಬಹುಮನಿ ಅರಸನಿಗೂ ನಡೆದ ಯುದ್ಧ ಪ್ರಸಂಗ ಈ ನಾಟಕ, ಇದೊಂದು ದುರಂತ ನಾಟಕವಾಗಿದೆ. *ಕಾಕನಕೋಟೆ* ರಣಧೀರ

ಕಂಠೀರವ ನರಸರಾಜ ಮೈಸೂರು ಅರಸ ಒಡೆಯರ ಕಾಲದಲ್ಲಿ ನಡೆದ ಘಟನೆ ಇಲ್ಲಿನ ಕಥಾವಸ್ತುವಾಗಿದೆ ಕನ್ನಡ ನಾಟಕಗಳಲ್ಲಿಯೇ ಇದಕ್ಕೊಂದು ಉನ್ನತ ಸ್ಥಾನವಿದೆ. ಇದು ಸಿನಿಮಾ ಆಗಿದೆ, ಇದರ ರಚನೆಗೆ ಪ್ರೇರಕವಾದ ಸಂದರ್ಭ ಮಾಸ್ತಿಯವರು ವಿವರಿಸಿದ್ದಾರೆ. ಮೈಸೂರಿನಲ್ಲಿ ಸಬ್ ಡಿವಿಜನ್ ಅಧಿಕಾರಿಯಾಗಿದ್ದಾಗ ಹೆಗ್ಗಡದೇವನ ಕೋಟೆ ಪ್ರದೇಶದ ಕಾಡು, ನದಿ, ಇವೆಲ್ಲವನ್ನು ನೋಡಿ ಸಂತೋಷ ಪಟ್ಟಿದ್ದವರಿಗೆ 1928–29 ರಲ್ಲಿ ಸೆನ್ಸಸ್ ಸೂಪರಿಟೆಂಡೆಂಟ್ ಆಗಿದ್ದಾಗ ಹೆಗ್ಗಡದೇವನ ಕೋಟೆಯ ಕಾಡು ಕುರುಬರ ಜೀವನಕ್ರಮ, ಸಮಾಜ ಪದ್ಧತಿಗಳು ಇವೆಲ್ಲ ನಾಟಕಕ್ಕೆ ಪ್ರೇರಣೆ ಒದಗಿಸಿತು. ಕಾಡು ಕುರುಬರಲ್ಲಿ ಹೊಸ ಜೀವನದ ಆಶೆಯನ್ನು ನಾಟಕ ಹುಟ್ಟಿಸುತ್ತದೆ.

ಅನಾರ್ಕಲಿ ನಾಟಕವು ಪ್ರೀತಿ, ಪ್ರೇಮ ಸಂಗಮದಿಂದ ಕೂಡಿದ ನಾಟಕ, ಸಲೀಂ ಅನಾರ್ಕಲಿ ಇವರಿಬ್ಬರ ಪ್ರೇಮದ ಮಧ್ಯ ಅಕ್ಬರನ ಪಾತ್ರ ನಿಲ್ಲುತ್ತದೆ. ಅನಾರ್ಕಲಿಯ ಬದುಕು ದುರಂತದಲ್ಲಿ ಕೊನೆಯಾಗುತ್ತದೆ. ಯಶೋಧರಾ ನಾಟಕದ ವಸ್ತು ಸ್ತ್ರೀ ಸಮಾನತೆಯಿಂದ ಕೂಡಿದ್ದು ಇದು ಒಂದು ಗೀತನಾಟಕ ಸರಳ ರಗಳೆಯಲ್ಲಿ ರಚಿತವಾಗಿದೆ. ಯಶೋಧರಾ ಪಾತ್ರದಲ್ಲಿ ಮಾಸ್ತಿ ಅವರ ಪ್ರತಿಭೆ ಅನಾವರಣಗೊಳಿಸುವ ಭಾರತೀಯ ನಾರಿಯ ವ್ಯಕ್ತಿತ್ವ ಎದ್ದು ಕಾಣುತ್ತದೆ. ಪರಿತ್ಯಕ್ತ ಮಡದಿಯೊಬ್ಬಳ ಕಣ್ಣೀರಿನ ಕಥೆಯಲ್ಲಿ ಲೋಕೋದ್ದಾರದ ಹಾದಿಯಲ್ಲಿ ನಿಂತ ತನ್ನ ಪೂರ್ವಾಶ್ರಮದ ಪತಿ ಏರಿರುವ ಎತ್ತರಕ್ಕೆ ಹೊರಟ ಗರತಿಯೊಬ್ಬಳು ಯಶೋಗಾಥೆ ವೈವಿದ್ಯಪೂರ್ಣವಾಗಿದೆ.

ಮಹಾಸತಿ ಮಾಸ್ತಿ ಅವರ ಒಂದು ಸಾಂಪ್ರಾದಾಯಿಕ ನಾಟಕ, ಇದರಲ್ಲಿ ತಮ್ಮ ಹುಟ್ಟೂರಿನ ಹೆಸರು ಸೇರಿಕೊಂಡು ಮಹಾಸತಿ ಒಂದು ಮೌಲ್ಯವನ್ನು ಚಿತ್ರಿಸುವ ನಾಟಕವಾಗಿ ಹೊರಹೊಮ್ಮಿದೆ. ಹೆಣ್ಣು ಮಗಳೊಬ್ಬಳ ಶ್ರದ್ದೆ, ನಿಷ್ಟೆ, ತ್ಯಾಗಕ್ಕೆ ಸಂಕೇತವಾಗಿ ಇಲ್ಲಿನ ನಾಟಕ ರಚನೆಯಾಗಿದೆ. ಭಟ್ಟರ ಮಗಳು ಇದೊಂದು ಬಾನೂಲಿ ನಾಟಕವಾಗಿದೆ, ವಿಷ್ಣು ಚಿತ್ತರೆಂಬ ಭಟ್ಟರಿಗೆ ದೊರೆತ ಮಗು ಶ್ರೀ ವೈಷ್ಣವ ಅಂಡಾಳ, ಸಂತಳಾದ ಅಂಡಾಳ ಬದುಕಿಗೆ ಸಂಬಂಧಿಸಿದ ಕಥೆ ಇಲ್ಲಿದೆ. ತಿರುಪಾಣಿ ಮಾಸ್ತಿಯವರ ಭಕ್ತಿ ಪ್ರಧಾನ ನಾಟಕಗಳಲ್ಲಿ ಒಂದಾಗಿದೆ. ಹಾಗೂ ಇದೊಂದು ಗೀತನಾಟಕ, ಪಾಣಿ ತಿರುಪಣಿ ತಿರುಪಣಿ ಆಗುವದು. ದೇವಾಲಯದ ಪ್ರವೇಶದ ಬಾಗ್ಯ ಪಡೆಯುವುದು ಭಗವತ್ ಭಕ್ತೆಯ ಕಾರಣವಾಗಿ ಭಗವಂತನಲ್ಲಿ ಐಕ್ಯವಾಗಿ ಆಳವಾರರಲ್ಲಿ ಒಬ್ಬನಾಗುವುದು ಇಲ್ಲಿಯ ಕಥೆಯ ವಸ್ತುವಾಗಿದ್ದು, ದೇವರ ಸಾಮ್ರಜ್ಯದಲ್ಲಿ ಮೇಲು–ಕೀಳಿಲ್ಲ ಎನ್ನುವ ತತ್ವ ನಾಟಕದ ತಿರುಳಾಗಿದೆ. ಪುರಂದರ ದಾಸರ ನಾಲ್ಕು ದಶಕಗಳಿಂದ ಕೂಡಿದ ನಾಟಕ ಇದು, ಪುರಂದರ ದಾಸರ ಬದುಕಿನ ಸುತ್ತ ಹಬ್ಬಿಕೊಂಡಿರುವ ಪವಾಡಗಳನ್ನು ಬಿಟ್ಟು ಭಕ್ತಿ ಸಾಮಾಜಿಕ ಕಳಕಳಿಯಿಂದ ಕೂಡಿದ ಅವರ ವ್ಯಕ್ತಿತ್ವವನ್ನ ಚಿತ್ರಿಸುವ ನಾಟಕ ಇಲ್ಲಿನ ಕಥಾವಸ್ತುವಾಗಿದೆ.

ಸಾಮಾಜಿಕ ನಾಟಕ ಅವರ ಸಾಮಾಜಿಕ ನಾಟಕ ಮಂಜುಳಾ ಮನೆಯಲ್ಲಿ ಅತ್ತೆಯ ಪರಿಣಾಮವಾಗಿ ಕುಟುಂಬ ಜೀವನ ಹೇಗೆ ವಿಷಮಯವಾಗುತ್ತದೆ, ಎನ್ನುವುದರ ಚಿತ್ರಣವಿದೆ. ಅತ್ತೆ ಮತ್ತು ಮಾವಂದಿರ ಬೇಜವಾಬ್ದಾರಿತನದಿಂದ ಕುಟುಂಬಗಳು ಹೇಗೆ ಬಿರುಕು ಬಿಡುತ್ತವೆ ಎನ್ನುವುದರ ಚಿತ್ರಣ ರಸವತ್ತಾಗಿ ಈ ನಾಟಕದಲ್ಲಿ ಮೂಡಿದೆ.

**ಮಾಸ್ತಿ ಕಾವ್ಯಗಳ ವಸ್ತು ವೈವಿದ್ಯತೆ**

ಕವಿತೆ ಇವರ ಇನ್ನೊಂದು ಪ್ರತಿಭಾ ರಂಗವಾಗಿತ್ತು ಕೆಲವು ಉತ್ತಮ ಕವಿತೆಗಳನ್ನು ಖಂಡ ಕಾವ್ಯಗಳನ್ನು ಮಾಸ್ತಿ ಬರೆದಿದ್ದಾರೆ. ಅಲ್ಲದೆ ಕಥನ ಕವನಗಳನ್ನು ರಚಿಸಿದ್ದಾರೆ. ಸುಮಾರು ಹದಿಮೂರು ಕವನ ಸಂಕಲನಗಳನ್ನು ರಚಿಸಿದ್ದಾರೆ. ಅವುಗಳೆಂದರೆ ಅರುಣ, ಚೆಲುವು, ತಾವರೆ, ನವರಾತ್ರಿ, ಬಿನ್ನಹ, ಮನವಿ, ಮಲಾರ, ಸುನೀತ ಇವು ಕವನ ಸಂಕಲನಗಳಾದರೆ ಗೌಡರಮಲ್ಲಿ, ಮೂಕನ ಮಕ್ಕಳು, ರಾಮನವಮಿ, ಸಂಕ್ರಾಂತಿ, ಇತ್ಯಾದಿಗಳು ಕಥನ ಕವನಗಳಾಗಿವೆ. ಶ್ರೀರಾಮ ಪಟ್ಟಾಭಿಷೇಕ ಶ್ರೀರಾಮನ ಪಟ್ಟಾಭಿಷೇಕವನ್ನು ಮುಖ್ಯ ವಸ್ತುವಾಗಿಸಿಕೊಂಡು ರಾಮಾಯಣದ ಸಮಗ್ರ ಕಥೆಯನ್ನು ವಿವರಿಸುವಂತಹ ಮಹಾಕಾವ್ಯ ಇದು ಸರಳ ರಗಳೆಯಿಂದ ಕೂಡಿದೆ. ಮಾಸ್ತಿಯವರ ಕಾವ್ಯಲೋಕ ವಿಸ್ತಾರವಾದದ್ದಾಗಿದೆ. ಅಷ್ಟೇ ವೈವಿದ್ಯತೆಯಿಂದ ಕೂಡಿತ್ತು, ಭಕ್ತಿಗೀತೆ, ಭಾವಗೀತೆ, ಕಥನ ಕವನ, ಮಹಾಕಾವ್ಯ, ಅಷ್ಟಷಟ್ಪದಿ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಸಮಾಜದಲ್ಲಿ ಕಂಡ ಅನುಭವಗಳನ್ನು ಕವನಗಳಲ್ಲಿ ಹೆಣೆದಿದ್ದಾರೆ.

**ಭಾವಗೀತೆಯ ಕವನ ಸಂಕಲನಗಳು**

ಅರುಣ, ತಾವರೆ, ಸಂಕ್ರಾಂತಿ, ಚೆಲುವು ಇವು ಮಾಸ್ತಿಯವರ ಭಾವಗೀತಾತ್ಮಕ ಕವನ ಸಂಕಲನಗಳು. ಸಹೃದಯರ ಮನಸ್ಸನ್ನು ಸೆರೆಹಿಡಿಯುವ ಮೋಡಿ ಇಲ್ಲಿನ ಕವನ ಸಂಕಲನಗಳ ಪ್ರಧಾನ ಗುಣವಾಗಿದೆ, ಗೇಯತೆ ಇಲ್ಲಿನ ಕವನಗಳ ಜೀವನಾಡಿ, ನಾದ ಮಾದುರ್ಯ ಈ ಕವನಗಳ ಜೀವಾಳ, ಕನ್ನಡ ನವೋದಯ ಸಾಹಿತ್ಯದ ಭಾವಗೀತೆಗಳ ಎಲ್ಲ ವಿಶಿಷ್ಟ ಲಕ್ಷಣಗಳನ್ನು ನಾವು ಮಾಸ್ತಿಯವರ ಭಾವಗೀತೆಗಳಲ್ಲಿ ಕಾಣುತ್ತೇವೆ.

**ಸುನೀತಗಳ ಸಂಕಲನ**

ಇವರ 'ಮಲಾರ' ಸುನೀತಗಳ ಸಂಕಲನವಾಗಿದೆ. ಇದು ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾದದ್ದು, ವ್ಯಕ್ತಿ ಚಿತ್ರಗಳನ್ನು ಕವಿ ತಮ್ಮ ಕವನಗಳ ಮೂಲಕ ನೀಡಿದ್ದಾರೆ. ಹದಿನಾಲ್ಕು ಸಾಲುಗಳ ಈ ಪದ್ಯ ಪ್ರಕಾರವನ್ನು ಕನ್ನಡಕ್ಕೆ ತಂದ ಶ್ರೇಯಸ್ಸು ಮತ್ತು ಕನ್ನಡದಲ್ಲೇ ಒಂದು ಹೊಸ ಪರಂಪರೆಯನ್ನು ನೀಡಿದ ಕೀರ್ತಿ ಮಾಸ್ತಿಯವರಿಗಿದೆ.

**ಭಕ್ತಿ ಪ್ರಧಾನ ಕವನ ಸಂಕಲನ**

'ಬಿನ್ನಹ', 'ಮನವಿ' ಕವನ ಸಂಕಲನಗಳು ಭಕ್ತಿ ಪ್ರಧಾನವಾದವುಗಳಾಗಿವೆ. ಮಾಸ್ತಿಯವರಿಗೆ ಬಾಲ್ಯದಿಂದಲೂ ಅಂಟಿಕೊಂಡು ಬಂದ ಅಲೌಕಿಕ (ಧಾರ್ಮಿಕ) ಅನುಭವಗಳಲ್ಲಿವೆ.

**ಕಥನ ಕವನ ಸಂಕಲನ**

'ಗೌಡರ ಮಲ್ಲಿ' ಒಂದು ಕಥನ ಕವನವಾಗಿದೆ. ಬಸವಿಯೊಬ್ಬಳು ಗೌಡರ ಮಡದಿಯಂತೆ ಬದುಕಿದ ಗರತಿಯೊಬ್ಬಳ ಕಥೆಯಾಗಿದೆ, ಗೌಡರ ಭೋಗ ಜೀವನದ ರಸಿಕ ಚಿತ್ರಣ ಇಲ್ಲಿ ಮನೋಜ್ಞವಾಗಿ ಮೂಡಿ ಬಂದಿದೆ. ಬಸವಿ ಗರತಿಯಾಗುವ ಗರಿಮೆ ಈ ಸಂಕಲನದಲ್ಲಿ ಇದೆ, ಗೌಡನಿಗೆ ಮಲ್ಲಿ ಎಷ್ಟು ಪ್ರಿಯಳಾಗುತ್ತಾಳೆಂದರೆ, ಗೌಡ ಒಂದು ತೋಪು ನಡೆಸಿ 'ಮಲ್ಲಿಯ ತೋಪು' ಎಂದು ಹೆಸರಿಡುತ್ತಾನೆ.

ಅಲ್ಲದೆ, ಅವರ ಮೂಕನ ಮಕ್ಕಳು, ಅರುಣ, ತಾವರೆ, ಸುನೀತ, ಶ್ರೀರಾಮನವಮಿ, ಕುರುಬರ ಹಂಪಣ್ಣ, ಗುಂಡುಸೂಜಿ, ನವರಾತ್ರಿ, ಮುಂತಾದ ಕವನ ಸಂಕಲನಗಳು ನವೋದಯ ಕವಿಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ನಿಸರ್ಗದ ವಸ್ತು ವ್ಯಾಪಾರಗಳಲ್ಲಿ ಪಶು, ಪಕ್ಷಿ, ಪ್ರಾಣಿಗಳಲ್ಲಿ ಆತ್ಮೀಯ ಸಂಬಂಧ ಸ್ಥಾಪಿಸಿಕೊಳ್ಳುವುದು ಪ್ರಕೃತಿಯ ಒಂದೊಂದು ಚೇತನವೂ ಪರಮಾತ್ಮನ ಪ್ರತಿರೂಪವೇ ಎಂದು ಭಾವಿಸಿರುವ ವಸ್ತು ವೈವಿಧ್ಯತೆ ಇಲ್ಲಿ ಕಂಡುಬರುತ್ತದೆ.

**ವಿಮರ್ಶಾ ಸಾಹಿತ್ಯದ ವಸ್ತು ವೈವಿಧ್ಯತೆ**

ಕನ್ನಡ ಸಾಹಿತ್ಯದ ಪ್ರಾರಂಭದ ಹಂತದ ಮೊದಲ ವಿಮರ್ಶಕರಲ್ಲಿ ಮಾಸ್ತಿಯವರು ಒಬ್ಬರು. ಒಂದು ಕಡೆ ವಿಮರ್ಶೆಯನ್ನು ಶಾಸ್ತ್ರೀಯವಾಗಿ ವ್ಯಖ್ಯಾನಿಸಿ ಇನ್ನೊಂದು ಕಡೆ ಸೂತ್ರಗಳ ಹಿನ್ನೆಲೆಯಲ್ಲಿ ರಾಮಾಯಣ, ಮಹಾಭಾರತಗಳನ್ನೇ ಅಲ್ಲದೆ ಕನ್ನಡ ಕವಿಗಳನ್ನು ಪರಿಚಯಿಸಿಕೊಡುವ ಅನನ್ಯ ಕಾರ್ಯ ಮಾಡಿದರು. 'ವಿಮರ್ಶೆ' ಎನ್ನುವ ಹೆಸರಿನಲ್ಲಿ ಮಾಸ್ತಿಯವರು ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಮೊದಲ ಭಾಗದಲ್ಲಿ ವಿಮರ್ಶೆಯ ಸ್ವರೂಪ, ಪ್ರಯೋಜನ ಹಾಗೂ ವೈಷ್ಣವ ದಾಸರ ಕೀರ್ತನೆಗಳು, ಕನ್ನಡ ನಾಡಿನ ಲಾವಣಿ, ಸಾಹಿತ್ಯ ಕುರಿತ ಪ್ರಬಂಧಗಳಿವೆ. ಎರಡನೆಯ ಭಾಗದಲ್ಲಿ ರವೀಂದ್ರರ ಗೀತಾಂಜಲಿ ಹಾಫೀಸ್ ಮಹಾಕವಿ, ಮುದ್ದಣ ಕವಿಯ ರಾಮಾಶ್ವಮೇಧ ಗೇಯತೆ ಹಾಗೂ ಏಕರ್ಮನ್‌ರ ನಡುವೆ ಕಾವ್ಯಮೀಮಾಂಸೆಯ ವಿಷಯದಲ್ಲಿ ನಡೆದ ಸಂಭಾಷಣೆ ಕುರಿತ ಲೇಖನಗಳಿವೆ. ಮೂರನೇ ಭಾಗದಲ್ಲಿ ಎಪಿಕ್ಟಿಟಸ್ ಗುರುವಿನ ಉಪದೇಶ ಮಾರ್ಕಸ್ ಆ ರೀತಿಯಸ್, ಆಗಸ್ಟನ್ ಭಿನ್ನಪ ಮೊದಲಾದ ಲೇಖನಗಳಿವೆ. ನಾಲ್ಕನೇ ಭಾಗದಲ್ಲಿ ಗಯಟೆ ಮಹಾಕವಿ ಕಾಳಿದಾಸನ ಮೇಘ ಸಂದೇಶ ನಾಟಕ, ಲಕ್ಷ್ಮೀಶನ ಕಾವ್ಯ ಕುರಿತ ಲೇಖನಗಳೂ, ಭಾರತತೀರ್ಥ ಆದಿಕವಿ ವಾಲ್ಮೀಕಿ ಇವು ಮಾಸ್ತಿಯವರ ವಿಮರ್ಶಾ ಪ್ರಬಂಧಗಳಾಗಿವೆ. ಪೂಜನ ಮಾಸ್ತಿಯವರು ಬೇರೆ ಬೇರೆ ಸಂದರ್ಭಗಳಲ್ಲಿ ವಿವಿಧ ಲೇಖಕರ ಕೃತಿಗಳಿಗೆ ಬರೆದ ಮುನ್ನುಡಿಗಳ ಸಂಕಲನವಾಗಿದೆ.

**ಅನುವಾದ ಸಾಹಿತ್ಯದ ವಸ್ತು ವೈವಿಧ್ಯತೆ**

ಮಾಸ್ತಿಯವರಿಗೆ ಸರಳವಾದ ಅನುವಾದ ಕಲೆ ಅವರಿಗೆ ಕರಗತವಾಗಿತ್ತು. ಇದಕ್ಕೆ ಅವರು ಸಂಸ್ಕೃತದಿಂದ ಕನ್ನಡಕ್ಕೆ ತಂದ ಎರಡು ಅನುವಾದ ಕೃತಿಗಳೇ ಜೀವಂತ ನಿದರ್ಶನವಾಗಿದೆ. 1959ರಲ್ಲಿ ಅವರು ಪ್ರಕಟಿಸಿದ ಕೃತಿ ಇದು, ಹೊಸಗನ್ನಡ ಗದ್ಯಾನುವಾದದ 'ಶ್ರೀಕೃಷ್ಣಕರ್ಣಾಮೃತ' ಮಕ್ಕಳ ಸಂಕಲನ ಮೊದಲ ಅನುವಾದ ಕೃತಿ. ನಂತರ ಅವರಿಗೆ ಅತ್ಯಂತ ಪ್ರಿಯವಾಗಿದ್ದ ವಾಲ್ಮೀಕಿ ರಾಮಾಯಣದ ಸಂಕ್ಷಿಪ್ತಾನುವಾದ ಸಂಕ್ಷಿಪ್ತ ವಾಲ್ಮೀಕಿ ರಾಮಾಯಣ ಅವರ ಎರಡನೆ ಅನುವಾದ ಕೃತಿ. ಅತ್ಯಂತ ಸರಳವಾಗಿ ಹೃದ್ಯವಾಗಿ ಇರುವ ಅನುವಾದ ಮಾಸ್ತಿಯವರ ಸಿದ್ಧಹಸ್ತದ ಬರವಣಿಗೆಗೆ ಒಳ್ಳೆಯ ನಿದರ್ಶನವಾಗಿದೆ.

**ಆತ್ಮಕಥೆಯ ವಸ್ತು ವೈವಿಧ್ಯತೆ**

ಮಾಸ್ತಿಯವರ ಆತ್ಮಕಥೆ 'ಭಾವ' ಇದು ಮೂರು ಭಾಗಗಳಲ್ಲಿ ರಚನೆಯಾಗಿದೆ. ಭಾಗ–1ರಲ್ಲಿ ಅವರ ಬಾಲ್ಯ ಜೀವನ, ವಿದ್ಯಾಭ್ಯಾಸ, ಮೈಸೂರು ಸಂಸ್ಥಾನದಲ್ಲಿ ಅವರು ಅಧಿಕಾರಿಯಾಗಿರುವಾಗಿನ ಜೀವನ

ಕುರಿತು ವಿವರಣೆ ಇದೆ. ಭಾಗ–2ರಲ್ಲಿ ಮಾಸ್ತಿಯವರ ಅಧಿಕಾರವಧಿಯಲ್ಲಿನ ಸರಕಾರದ ಅರ್ಥ ಶಾಖೆಯಲ್ಲಿ ಕಂಟ್ರೋಲರಾಗಿರುವಾಗಿನ ವಿವರಣೆ ದೊರೆಯುತ್ತದೆ. ಭಾಗ–3ರಲ್ಲಿ ಮಾಸ್ತಿಯವರು ತಾವು ಸ್ವ–ಇಚ್ಚೆಯಿಂದ ನಿವೃತ್ತರಾಗುವವರೆಗಿನ ಜೀವನ, ಆ ನಂತರದ ಸಾಮಾಜಿಕ ಮತ್ತು ಸಾಹಿತ್ಯಕ ಜೀವನದ ಚಿತ್ರಣವಿದೆ.

**ಜೀವನ ಚರಿತ್ರೆಯ ವಸ್ತು ವೈವಿದ್ಯತೆ**

ಮಾಸ್ತಿಯವರು ಕನ್ನಡದ ಒಬ್ಬ ಪ್ರಮುಖ ಜೀವನ ಚರಿತ್ರಾಕಾರರೂ ಆಗಿದ್ದರು. ರವೀಂದ್ರನಾಥ ಠಾಗೂರ ಮತ್ತು ಶ್ರೀ ರಾಮಕೃಷ್ಣ ಪರಮಹಂಸರನ್ನು ಕುರಿತು ಬರೆದ ಅವರ ಎರಡು ಜೀವನ ಚರಿತ್ರೆ ಕೃತಿಗಳು ಕನ್ನಡ ಜೀವನ ಚೆರಿತ್ರೆ ಸಾಹಿತ್ಯಕ್ಕೆ ನೀಡಿದ ಅತ್ಯಮೂಲ್ಯ ಕೊಡುಗೆಗಳಾಗಿವೆ. ರವೀಂದ್ರನಾಥ ಠಾಗೂರ 1935ರಲ್ಲಿ ಪ್ರಕಟವಾಗಿದೆ. ಅವರ ಬದುಕಿನ ಪರಿಚಯ, ರವೀಂದ್ರರ ಕೃತಿಗಳು, ಶಾಂತಿನಿಕೇತನ ಹಾಗೂ ಅವರ ಜೀವನ ದರ್ಶನಗಳ ಪರಿಚಯಗಳಿವೆ. ಮಾಸ್ತಿಯವರಿಗೆ ತಾವು ಮೆಚ್ಚಿಕೊಂಡ ಪ್ರತಿಭೆಗಳಲ್ಲಿ ರವೀಂದ್ರರೊಬ್ಬರಾಗಿದ್ದರು. ಶ್ರೀ ರಾಮಕೃಷ್ಣ ಪರಮಹಂಸರನ್ನು ಕುರಿತು ಬರೆದ ಮಾಸ್ತಿಯವರ ಇನ್ನೊಂದು ಜೀವನ ಚರಿತ್ರಾಕೃತಿ, ರಾಮಕೃಷ್ಣರ ಆಧ್ಯಾತ್ಮಿಕ ಬದುಕು ಮತ್ತು ಸಾಧನೆಗಳ ಚಿತ್ರಣ ಇಲ್ಲಿ ರಸವತ್ತಾಗಿ ಚಿತ್ರಿತವಾಗಿದೆ. ರಾಮಕೃಷ್ಣ ಪರಮಹಂಸರ ಜನ್ಮಶತಮಾನೋತ್ಸವದ ಸಂದರ್ಭಕ್ಕೆ ತಮ್ಮ ಕಾಣಿಕೆಯಾಗಿ ಬರೆದು ಅರ್ಪಿಸಿದ ಕೃತಿ ಇದಾಗಿದ್ದು ಮಾಸ್ತಿಯವರ ಕಥನ ಪ್ರತಿಭೆಯ ಹೊಳಪು ಇಲ್ಲಿ ಪ್ರಕಾಶಿತವಾಗಿದೆ.

**ಉಪಸಂಹಾರ**

ಒಟ್ಟಾರೆ ವೃತ್ತಿಯಿಂದ ಸರ್ಕಾರಿ ಅಧಿಕಾರಿಯಾಗಿ ಪ್ರವೃತ್ತಿಯಿಂದ ವೈವಿದ್ಯಪೂರ್ಣ ಬರಹಗಾರರಾದ ಮಾಸ್ತಿ ವೆಂಕಟೇಶ್ ಐಯ್ಯೆಂಗಾರ ಅವರು ಅಧಿಕಾರಿಯಾಗಿ ಅನೇಕ ಒತ್ತಡಗಳ ಮಧ್ಯೆ ಕಾರ್ಯನಿರ್ವಹಿಸುತ್ತಾ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವಿವಿಧ ಪ್ರಕಾರಗಳಲ್ಲಿ ಕೃಷಿಯನ್ನು ಮಾಡಿದ ಮತ್ತೊಬ್ಬ ಬರಹಗಾರ ಸಿಗುವುದು ಅತೀ ಅಪರೂಪವೆಂದೇ ಹೇಳಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಭಟ್ ಜಿ.ಎಸ್. (2010). *ಮಾಸ್ತಿ ಸಾಹಿತ್ಯ ಮನನ.* ತನುಮನ ಪ್ರಕಾಶನ, ಮೈಸೂರು.
- ಲಕ್ಷ್ಮೀ ನಾರಾಯಣ. ಆರ್. *ಮಾಸ್ತಿ: ಜ್ಞಾನಪೀಠ ಪ್ರಶಸ್ತಿ ವಿಜೇತರು.* ಕರ್ನಾಟಕ ಸಾಹಿತ್ಯ ಅಕಾಡೆಮೆ, ಬೆಂಗಳೂರು.
- ಮಾಸ್ತಿ ವೆಂಕಟೇಶ ಅಯ್ಯಂಗಾರ್ (2011). *ಚಿಕವೀರ ರಾಜೇಂದ್ರ.* ಎಂ.ವಿ.ಜೆ.ಕೆ. ಟ್ರಸ್ಟ್, ಬೆಂಗಳೂರು.
- ಮುನಿಯಪ್ಪ. *ಮಾಸ್ತಿ ಸಾಹಿತ್ಯ ಅವಲೋಕನ.* ಕರ್ನಾಟಕ ಸಾಹಿತ್ಯ ಅಕಾಡೆಮೆ, ಬೆಂಗಳೂರು.
- ಸಿದ್ಧಲಿಂಗಯ್ಯ. ಜಿ.ಎಸ್. (2013). ಶ್ರೀನಿವಾಸ. ನವ ಕರ್ನಾಟಕ ಪ್ರಕಾಶನ, ಬೆಂಗಳೂರು.